**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು.</u>**

**<u>ಸೆಷನ್ಸ್ ಕೇಸ್ ನಂಬ್ರ 44 / 2024</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಕ್ಷಯ ಆರ್ | <u>ಪ್ರಾಸಾಃ 2</u> |
| ತಂದೆಯ ಹೆಸರು | : | ರಾಘವೇಂದ್ರ ಸಾಲ್ಯಾನ್ | <u>ಚಾಸಾಃ 2</u> |
| ಪ್ರಾಯ | : | 28 ವರ್ಷ | **<u>ದಿನಾಂಕಃ 19-11-2025</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಲಿಫ್ಟ್ ಮ್ಯಾಕೆನಿಕ್ | |
| ವಾಸಸ್ಥಳ | : | ಎ.ಜೆ. ಎಸ್ಟೇಟ್ ಕಂಪೌಂಡ್ , ಕೊಲ್ಯ, ಸೋಮೆಶ್ವರ ಗ್ರಾಮ, ಮಂಗಳೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ಮೃತ ವರುಣ್ ನನ್ನ ಗೆಳೆಯ. ಚಾಸಾ-1, ವರುಣ್ ರವರ ತಮ್ಮ, ಚಾಸಾ-3 ನನ್ನ ಸ್ನೇಹಿತ. ವಿ.ಸಿ ಮೂಲಕ ಹಾಜರುಪಡಿಸಿದ 1ನೇ ಆರೋಪಿಯನ್ನು ಮತ್ತು ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಅವರಿಬ್ಬರು ನಮ್ಮ ಊರಿನವರು.

2. ದಿನಾಂಕ 13.12.2023 ರಂದು ನಾನು ಮೃತ ವರುಣ್, ಚಾಸಾ-1 ಮತ್ತು 3 ರವರು ಶನಿಪೂಜೆಯ ನಿಮಿತ್ತ ಸೋಮೆಶ್ವರ ಶನೀಶ್ವರ ಕಟ್ಟೆಯ ಪೈಂಟಿಂಗ್ ಕೆಲಸ ಮಾಡಲು ಹೋಗಿದ್ದೆವು. ಕೆಲಸ ಮುಗಿದ ಬಳಿಕ ರಾತ್ರಿ 10.00 ಗಂಟೆಗೆ ನಾನು ಮತ್ತು ಮೃತ ವರುಣ್ ರವರು, ಅವರಿಗೆ ಸೇರಿದ ದ್ವಿಚಕ್ರ ವಾಹನದಲ್ಲಿ ಮನೆಯ ಕಡೆಗೆ ಹೊರಟಿರುತ್ತೇವೆ. ಚಾಸಾ-1 ಮತ್ತು 3 ರವರು ನೀವು ಹೊರಡಿ , ನಾವು ಹಿಂದಿನಿಂದ ಬರುವುದಾಗಿ ಹೇಳಿರುತ್ತಾರೆ.

3. ನಾವು ಕೊಲ್ಯದ ಸಂತ ಜೋಸೆಫ್ ಜ್ಯೋಲ್ಯಾಂಡ್ ಶಾಲೆಯ ಗೇಟಿನ ಮುಂಭಾಗ ಗೇಟಿನ ಮುಂದೆ ಸ್ವಲ್ಪ ವಿಶ್ರಾಂತಿಗಾಗಿ ಕುಳಿತುಕೊಂಡಿದ್ದೆವು. ಅದೇ ಜಾಗದಲ್ಲಿ ಈ ಪ್ರಕರಣದ 1 ಮತ್ತು 2ನೇ ಆರೋಪಿಗಳು ಬೇರೆ ಬೇರೆ ದ್ವಿಚಕ್ರ ವಾಹನದಲ್ಲಿ ಕುಳಿತಿದ್ದರು. 1ನೇ ಆರೋಪಿಯು ವರುಣ್ ನನ್ನು ನೋಡಿ, ಏನು ಬೇವರ್ಸಿ ನಿನಗೆ ಭಯಂಕರ ಅಹಂಕಾರ ಉಂಟಲ್ಲ ಎಂದು ಹೇಳಿದರು. ಆಗ ವರುಣ್ ಹಾಗೆಲ್ಲಾ ಮಾತನಾಡಬೇಡ ಎಂದು ಉತ್ತರಿಸಿದ್ದು, 1ನೇ ಆರೋಪಿ ವರುಣ್ ನನ್ನು ಉದ್ದೇಶಿಸಿ ಬೇವರ್ಸಿ ಹಾಗೆಲ್ಲಾ ಮಾತನಾಡಬೇಡ ಎಂದು ಹೇಳಿ, ಆರೋಪಿಗಳು ವರುಣ್ ನ ಬಳಿ ಜಗಳಕ್ಕೆ ಬಂದು, ವರುಣ್ ನನ್ನು ಕೆಳಗೆ ದೂಡಿ ಹಾಕಿದರು. ವರುಣ್ ಎದ್ದು, 1ನೇ ಆರೋೇಪಿಯನ್ನು ಕೆಳಗೆ ಬೀಳಿಸಿ ಉರುಳಾಡಿರುತ್ತಾರೆ. ಆಗ ಚಾಸಾ-1 ಮತ್ತು 3 ರವರ ಅವರ ದ್ವಿಚಕ್ರ ವಾಹನದಲ್ಲಿ ಅಲ್ಲಿಗೆ ಬಂದಿದ್ದು, ಅವರು ಜಗಳ ನಿಲ್ಲಿಸಲು ಹೋದರು. ನನಗೆ ಭಯವಾಯಿತು, ಏನು ಮಾಡಲು ಆಗಲಿಲ್ಲ. 1ನೇ ಆರೋಪಿ ತನ್ನ ಕಿಸೆಯಲ್ಲಿದ್ದ ಚೂರಿಯನ್ನು ತೆಗೆದು, ವರುಣ್ ನ ಎದೆಯ ಎಡಭಾಗಕ್ಕೆ ಎರಡು ಬಾರಿ ಮತ್ತು ಎದೆಯ ಮಧ್ಯಭಾಗಕ್ಕೆ ಎರಡು ಬಾರಿ ಚು,ಚ್ಚಿರುತ್ತಾರೆ. ಆಗ ವರುಣ್ ನೆಲಕ್ಕೆ ಬಿದ್ದು, ಅವರಿಂದ ರಕ್ತ ಹರಿದಿರುತ್ತದೆ. ಆರೋಪಿಗಳು ಅವರವರ ದ್ವಿಚಕ್ರ ವಾಹನಗಳಲ್ಲಿ ಅಲ್ಲಿಂದ ಹೋಗಿರುತ್ತಾರೆ. 1ನೇ ಆರೋಪಿಯು ತನ್ನ ಸ್ಕೂಟರ್ ಸಂಖ್ಯೆ ಕೆಎ-19-ಹೆಚ್ ಜೆ 3018 ರಲ್ಲಿ ಮತ್ತು 2ನೇ ಆರೋಪಿ ಕೆಎ-19-ಹೆಚ್ ಜಿ-4550 ರ ದ್ವಿಚಕ್ರ ವಾಹನದಲ್ಲಿ ಹೋಗಿರುತ್ತಾರೆ. ಸದರಿ ಘಟನೆ ನಡೆಯುವಾಗ ರಾತ್ರಿ 11.30 ಗಂಟೆ ಆಗಬಹುದು. ಸದರಿ ಘಟನೆಯನ್ನು ನಾನು ಶಾಲೆಯ ಪಕ್ಕದಲ್ಲಿರುವ ಬೀದಿ

ದೀಪದ ಬೆಳಕಿನಿಂದ ನೋಡಿರುತ್ತೇನೆ. ಚಾಸಾ-1 ಮತ್ತು 3 ರವರು ವರುಣ್ ನನ್ನು ಉಪಚರಿಸಿದಾಗ ನೆಲದಲ್ಲಿ ಬಿದ್ದಿದ್ದ ವರುಣ್ ಎದ್ದು, ಅವರ ಮನೆಯ ಕಡೆಗೆ ನಡೆದುಕೊಂಡು ಹೋಗಿ, ಮನೆಯ ಎದುರು ಬಿದ್ದು ಜೋರಾಗಿ ಅಮ್ಮ ಅಮ್ಮ ಎಂದು ಕರೆದಿರುತ್ತಾನೆ, ಆಗ ಆತನ ಅಮ್ಮ ಅಪ್ಪ ಮತ್ತು ತಂಗಿ ಬಂದಿರುತ್ತಾರೆ. ಅಮ್ಮ ವರುಣ್ ಗೆ ನೀರು ತಂದು ಕುಡಿಸಿರುತ್ತಾರೆ. ಚಾಸಾ-1 ಜೋರಾಗಿ ಬೊಬ್ಬೆ ಹೊಡೆದಿರುತ್ತಾರೆ.

4. ಚಾಸಾ-3 ರವರು ಚಾಸಾ-5 ರವರಿಗೆ ಕೂಡಲೇ ಸ್ಥಳಕ್ಕೆ ಬರುವಂತೆ ಕರೆ ಮಾಡಿ ತಿಳಿಸಿದ್ದು, ಚಾಸಾ-5 ರವರು ಸ್ಥಳಕ್ಕೆ ಬಂದ ಬಳಿಕ , ಚಾಸಾ-4 ರವರ ಅಟೋ ರಿಕ್ಷಾ ಅಲ್ಲಿಗೆ ಬಂದಿದ್ದು, ಗಾಯಗೊಂಡ ವರುಣ್ ನನ್ನು ಚಾಸಾ-3 ಮತ್ತು 5 ರವರು ರಿಕ್ಷಾದ ಒಳಗಡೆ ಹಾಕಿ , ದೇರಳಕಟ್ಟೆಯ ಕೆ ಎಸ್ ಹೆಗ್ಡೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಮತ್ತು ಚಾಸಾ-1 ಬೈಕಿನಲ್ಲಿ ಹಿಂದಿನಿಂದ ಹೋಗಿರು ತ್ತೇವೆ. ವರುಣ್ ನನ್ನು ತುರ್ತು ಚಿಕಿತ್ಸಾ ವಿಭಾಗದಲ್ಲಿ ದಾಖಲಿಸಿದ್ದು , ಮರುದಿನ ಮುಂಜಾನೆ 2.30 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ವರುಣ್ ಮೃತಪಟ್ಟಿರುತ್ತಾರೆ.

5. ಈ ಘಟನೆಗಿಂತ 4-5 ವರ್ಷಗಳ ಹಿಂದೆ ಮೃತ ವರುಣ್ ರವರ ಸೋದರ ಸಂಬಂಧಿ ಅರುಣ್ ಗಟ್ಟಿರವರ ಮೇಲೆ, ಈ ಪ್ರಕರಣದ 1ನೇ ಆರೋಪಿ ಕೊಲೆಯತ್ನ ಮಾಡಿದ್ದು, ಅರುಣ್ ಗಟ್ಟಿ, ವರುಣ್ ರವರ ಸಂಬಂಧಿಕರಾಗಿದ್ದರಿಂದ ಅದೇ ದ್ವೇಷದಿಂದ ವರುಣ್ ರವರನ್ನು ಕೊಲೆ ಮಾಡಿರುತ್ತಾರೆ.

6. ಘಟನೆಯ ಸಮಯದಲ್ಲಿ ನಾನು ಬೂದು ಬಣ್ಣದ ಉದ್ದ ತೋಳಿನ ಟೀ ಶರ್ಟ್ ಅದರಲ್ಲಿ ಬಿಳಿ ಗೆರೆಗಳಿರುವ ಪಟ್ಟಿ ಇತ್ತು ಮತ್ತು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದ್ದು ವರುಣ್ ನನ್ನುರಿಕ್ಕಾಕ್ಕೆ ಹಾಕುವಾಗ, ಆತನ ರಕ್ತ ನನ್ನ ಟೀಶರ್ಟ್ ಮತ್ತು ಜೀನ್ಸ್ ಪ್ಯಾಂಟಿಗೆ ತಾಗಿರುತ್ತದೆ. ದಿನಾಂಕ 14.12.2023 ರಂದು ರಾತ್ರಿ 9.15 ಗಂಟೆಗೆ ನಾನು ಪೋಲಿಸ್ ಠಾಣೆಗೆ ಹೋಗಿ, ತನಿಖಾದಿಕಾರಿಯವರ ಮುಂದೆ ನಾನು ಘಟನೆಯ ಸಮಯ ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸಿರುತ್ತೇನೆ. ಅವರು ಚಾಸಾ-13 ಮತ್ತು 14 ರವರ ಸಮಕ್ಷಮ ಸದರಿ ಬಟ್ಟೆಗಳನ್ನು ಬಿಳಿ ಬಟ್ಟೆಯಲ್ಲಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಅರಗು ಸೀಲು ಹಾಕಿ ಹೊಲಿದು, ಚಾಸಾ-13 ಮತ್ತು 14 ರವರ ಸಹಿ ಪಡೆದು ಅದಕ್ಕೆ ಕ್ರಮಸಂಖ್ಯೆ 16 ಮತ್ತು 17 ಎಂದು ಗುರುತಿಸಿದ್ದು , ಈ ಬಗ್ಗೆ ಮಹಜರನ್ನು ರಾತ್ರಿ 9.15 ರಿಂದ 10.30 ರವರೆಗೆ ಮಾಡಲಾಗಿರುತ್ತದೆ ಮತ್ತು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು **ನಿಪಿ-8** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-8(ಎ)** ಎಂದು ಗುರುತಿಸಲಾಯಿತು. ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ.

7. ಆರೋಪಿತರು ಹಲ್ಲೆಗೆ ಉಪಯೋಗಿಸಿದ ಚೂರಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಎಂ.ಒ-7 ರ ಚೂರಿಯನ್ನು ನೋಡಿ ಗುರುತಿಸುತ್ತಾರೆ.

8. ಬಿಳಿ ಬಟ್ಟೆಯಲ್ಲಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲು ಹಾಕಲಾದ ಸ್ವತ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ಅನುಮತಿ ಮೇರೆಗೆ ತೆರೆದು ನೋಡಲಾಗಿ, ಅದರಲ್ಲಿ ಬೂದು ಬಣ್ಣದ ಉದ್ದ ತೋಳಿನ ಟೀ ಶರ್ಟ್ ಅದರಲ್ಲಿ ಬಿಳಿ ಗೆರೆಗಳಿರುವ ಪಟ್ಟಿ ಇದ್ದು ಮತ್ತು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಇದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಬಟ್ಟೆಗಳನ್ನು **ಎಂ.ಒ-8 ಮತ್ತು ಎಂ.ಒ-9** ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಗಳನ್ನು **ಎಂ.ಒ-8(ಎ) ಮತ್ತು ಎಂ.ಒ-9(ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ.ಬಿ.ಎ.ಬಿ ವಕೀಲರಿಂದ</u>**

9. ಮೃತ ವರುಣ್ ಗಟ್ಟಿ ನನ್ನ ಆತ್ಮೀಯ ಸ್ನೇಹಿತ. ಆತನ ವಿರುದ್ಧ ಬಂದರು ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಅವನೊಬ್ಬ ರೌಡಿ ಶೀಟರ್ ಎಂದರೆ ಸರಿಯಲ್ಲ.

10. ನಾನು ಶನಿಪೂಜೆಯ ಕಟ್ಟೆಗೆ ರಾತ್ರಿ 10.00 ಗಂಟೆಗೆ ಪೈಂಟ್ ಮಾಡಲು ಹೋಗಿದ್ದೆವು. ಸದರಿ ಜಾಗದಿಂದ ಘಟನೆ ನಡೆದ ಜಾಗ ಬೈಕಿನಲ್ಲಿ ಬಂದರೆ 15 ನಿಮಿಷ ಆಗುತ್ತದೆ. ಸದರಿ ಜಾಗ ಸಾರ್ವಜನಿಕ ರಸ್ತೆ ಮತ್ತು ಅದು ತೊಕ್ಕೊಟ್ಟಿಗೆ ಹೋಗುತ್ತದೆ. ಅಲ್ಲಿ ರಾತ್ರಿ ಹೊತ್ತಿನಲ್ಲಿ ವಾಹನಗಳು ಓಡಾಡುತ್ತದೆ. ಘಟನೆ ನಡೆದ ಜಾಗದಿಂದ ನಮ್ಮ ಮನೆ ತೊಕ್ಕೊಟ್ಟು ಕಡೆಗೆ ಇರುತ್ತದೆ. ಸದರಿ ಜಾಗದಿಂದ ನಮ್ಮ ಮನೆಗೆ ನಡೆದು ಹೋದರೆ 5 ನಿಮಿಷಗಳ ದಾರಿ.

11. ಘಟನೆಯಾದ ಸಮಯ ರಾತ್ರಿ 10.30 ಆಗಿರುತ್ತದೆ. ಚಾಸಾ-1 ಮತ್ತು 3 ರವರು ನಾವು ಘಟನೆ ಜಾಗಕ್ಕೆ ತಲುಪಿದ 15 ನಿಮಿಷಗಳ ನಂತರ ಅಂದರೆ 10.45 ಗಂಟೆಗೆ ಬಂದಿರುತ್ತಾರೆ. ಆ ಸಮಯದಲ್ಲಿ ಸದರಿ ಜಾಗದಲ್ಲಿ ಬೇರೆ ವಾಹನಗಳು ಸಂಚರಿಸುತ್ತಿತ್ತಾ ಎಂದರೆ ಹೌದು. ಜ್ಯೋಲ್ಯಾಂಡ್ ಶಾಲೆಯ ಹತ್ತಿರ ಸಿಸಿ ಕ್ಯಾಮೆರಾ ಇರುವುದಿಲ್ಲ. ನಾವು ಸದರಿ ಶಾಲೆಯ ಹತ್ತಿರ ಕೂರಲು ವಿಶೇಷ ಕಾರಣ ಇರಲಿಲ್ಲ, ಕೆಲಸ ಮಾಡಿ ಸುಸ್ತಾದ ಕಾರಣ ಅಲ್ಲಿ ಕುಳಿತಿದ್ದೆವು. ಘಟನೆ ನಡೆಯಿತು ಎಂಬ ಜಾಗದಿಂದ ಮೃತ ವರುಣ್ ರವರ ಮನೆ ಸುಮಾರು 50 ಮೀಟರ್ ದೂರ ಇರುತ್ತದೆ. ಘಟನೆ ನಡೆಯಿತು ಎಂಬ ಜಾಗದಿಂದ ಕರೆದರೆ ವರುಣ್ ನ ಮನೆಯವರಿಗೆ ಸದ್ದು ಕೇಳಿಸುತ್ತದೆ. ಸದರಿ ದಿನ ನಾವು ಅಲ್ಲಿಂದ ವರುಣ್ ರವರ ಮನೆಯವರನ್ನು ಕೂಗಿ ಕರೆದಿರುವುದಿಲ್ಲ. ಆ ಸಮಯದಲ್ಲಿ ನನ್ನ ಬಳಿ ಮೊಬೈಲ್ ಫೋನ್ ಇತ್ತು.

12. ಚಾಸಾ-1 ಮತ್ತು 3 ರವರಿಗೆ ನಾನು ಕರೆ ಮಾಡಿ ಕರೆದಿರುವುದಿಲ್ಲ ಏಕೆಂದರೆ ಅವರು ಹಿಂದಿನಿಂದ ಬರುತ್ತಿದ್ದರು. ಘಟನೆಯ ಬಗ್ಗೆ ಪೋಲಿಸರಿಗೆ ಅ ದಿನ ರಾತ್ರಿ ವಿಷಯ ತಿಳಿಸಿದ್ದೀರಾ ಎಂದರೆ ನನಗೆ ತಿಳಿದಿಲ್ಲ, ಆದರೆ ಆಸ್ಪತ್ರೆಯಲ್ಲಿ ಪೋಲಿಸರು ಬಂದು ರಾತ್ರಿ 12.30 ಗಂಟೆಗೆ ವಿಚಾರಿಸಿರುತ್ತಾರೆ. ನಾನು ಘಟನೆಯ ಬಗ್ಗೆ ಪೋಲಿಸರಿಗೆ ಹೇಳಿರುತ್ತೇನೆ.

13. ಸದರಿ ಘಟನೆ 7-8 ನಿಮಿಷಗಳ ಕಾಲ ನಡೆದಿರುತ್ತದೆ. ಸದರಿ ಸಮಯದಲ್ಲಿ ನಾನು ಬಿಡಸಲು ಹೋಗಿರುತ್ತೇನೆ ಮತ್ತು ಬೇರೆ ಬೇರೆ ಮಾಡಿರುತ್ತೇನೆ, ಆದರೆ ಅವರು ಗಲಾಟೆ ಮುಂದುವರೆಸಿರುತ್ತಾರೆ. ಜ್ಯೋಲ್ಯಾಂಡ್ ಶಾಲೆಯ ಹತ್ತಿರ ಯಾವುದೇ ಬೀದಿ ದೀಪ ಇಲ್ಲ ಎಂದರೆ ಸರಿಯಲ್ಲ . ಘಟನೆಯ

ಬಗ್ಗೆ ನಾನು ಅವರ ಮನೆಯವರಿಗೆ ಹೋಗಿ ಹೇಳಲು ಪ್ರಯತ್ನಿಸಿರುವುದಿಲ್ಲ ಏಕೆಂದರೆ ನಾನು ಜಗಳ ಬಿಡಿಸುತ್ತಿದ್ದೆ.

14. ನನ್ನ ಪ್ರಕಾರ, 1ನೇ ಆರೋಪಿ ಸೋಮೇಶ್ವರ ಕಡೆಗೆ ಹೋಗುವ ದಿಕ್ಕಿನ ಕಡೆಗೆ ನಿಂತಿದ್ದರು. ನಾನು ತೊಕ್ಕೊಟ್ಟಿಗೆ ಹೋಗುವ ಕಡೆಗೆ ವಾಹನ ನಿಲ್ಲಿಸಿದ್ದೆ. ಅದರ ಬದಿಯಲ್ಲಿರುವ ದಂಡೆಯಲ್ಲಿ ಕುಳಿತಿದ್ದೆವು. ಸದರಿ ದಂಡೆ ಜ್ಯೋಲ್ಯಾಂಡ್ ಶಾಲೆಯ ಗೇಟ್ ಗೆ ತಾಗಿ ಇರುತ್ತದೆ. ನಾನು ಮತ್ತು ವರುಣ್ ಅಕ್ಕಪಕ್ಕದಲ್ಲಿ ಕುಳಿತಿದ್ದೆವು. ನನಗೆ ಮತ್ತು 1ನೇ ಆರೋಪಿಗೆ ಘಟನೆಗೆ ಮುನ್ನ 4-5 ವರ್ಷಗಳಿಂದ ಯಾವುದೇ ಮಾತುಕತೆ ಇರಲಿಲ್ಲ. 4-5 ವರ್ಷಗಳಿಂದ ನಮಗೆ 1ನೇ ಆರೋಪಿಯ ಮೇಲೆ ದ್ವೇಷ ಇತ್ತು ಎಂದರೆ ಸರಿಯಲ್ಲ.

15. ವರುಣ್ ರವರು ಗಾಯವಾದ ನಂತರ 30 ಮೀಟರ್ ನಷ್ಟು ಓಡಿ, ಅವರ ಮನೆಯ ಹತ್ತಿರ ಬಿದ್ದಿರುತ್ತಾರೆ. ಸದರಿ ಜಾಗಕ್ಕೆ ಹೋಗಿ, ನಾನು ವರುಣ್ ರವರನ್ನು ಎತ್ತಿ ಆರೈಕೆ ಮಾಡಿರುತ್ತೇನೆ, ಆ ಸಮಯದಲ್ಲಿ ನನ್ನ ಬಟ್ಟೆಗೆ ರಕ್ತ ತಾಗಿರುತ್ತದೆ. ಸದರಿ ಬಟ್ಟೆಗಳನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ಜಗಳವನ್ನು ಬಿಡಸಲು ಮೊದಲು ನಾನು ಪ್ರಯತ್ನಿಸಿದ್ದು , ನಂತರ ನಾನು, ಚಾಸಾ-1 ಮತ್ತು 3 ರವರು ಪ್ರಯತ್ನಿಸಿರುತ್ತೇವೆ. ಗಲಾಟೆಯಾಗುವ ಸಮಯದಲ್ಲಿ ಚಾಸಾ-1 ಮತ್ತು 3 ರವರು ವರುಣ್ ರವರ ಮನೆಯ ಹತ್ತಿರ ಹೋಗಿರುವುದಿಲ್ಲ. ಚಾಸಾ-1 ಮತ್ತು 3 ರವರು ಘಟನೆಯ ಜಾಗಕ್ಕೆ ಬಂದ ನಂತರ, 5-8 ನಿಮಿಷಗಳ ಕಾಲ ಗಲಾಟೆ ನಡೆದಿತ್ತು. ಅವರುಗಳ ಸಹ ಆ ಸಮಯದಲ್ಲಿ ಜಗಳವನ್ನು ಬಿಡಿಸಲು ಪ್ರಯತ್ನಿಸಿರುತ್ತಾರೆ, ಆದರೆ ನಂತರವೂ ಕೂಡ ಜಗಳ

ಮುಂದುವರಿದಿತ್ತು.

16. ವರುಣ್ ರೌಡಿ ಶೀಟರ್ ಆಗಿದ್ದು, ಅವರಿಗೆ ಊರಿನಲ್ಲಿ ಮತ್ತು ಇತರ ಕಡೆಗಳಲ್ಲಿ ವೈರಿಗಳು ಇರುತ್ತಾರೆ ಎಂದರೆ ಅವರು ರೌಡಿ ಶೀಟರ್ ಅಲ್ಲ, ವೈರಿಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು ರಿಕ್ಷಾದ ಹಿಂದೆ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಚಾಸಾ-1 ರವರ ವಾಹನದಲ್ಲಿ ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಹೋದ ಸಮಯ, ವರುಣ್ ರವರು ಮರಣ ಹೊಂದಿರಲಿಲ್ಲ. ಜ್ಯೋಲ್ಯಾಂಡ್ ಶಾಲೆಯ ಹತ್ತಿರದಲ್ಲಿ ಕ್ರಿಶ್ಚಿಯನ್ ರವರ ಮನೆ ಇದ್ದು, ನಂತರದಲ್ಲಿ ವರುಣ್ ರವರ ಮನೆ ಇರುತ್ತದೆ. ಘಟನೆ ನಡೆದ ಸಮಯ ಸದರಿ ದಾರಿಯಲ್ಲಿ ಯಾವುದೇ ವಾಹನ ಹಾದು ಹೋಗಿರುವುದಿಲ್ಲ. ವರುಣ್ ರವರು ಅವರ ಮನೆಯ ಹತ್ತಿರ ಬಿದ್ದಾಗ, ನಾನು ಪೋಲಿಸರಿಗೆ ಮಾಹಿತಿ ನೀಡಿರುವುದಿಲ್ಲ. ಈ ಕೇಸಿನ ದೂರನ್ನು ಯಾರು ನೀಡಿರುತ್ತಾರೆಂದು ಗೊತ್ತಿಲ್ಲ.

17. ನನ್ನನ್ನು ನಂತರ ಪೋಲಿಸ್ ಠಾಣೆಯಲ್ಲಿ ಮರುದಿನ ರಾತ್ರಿ 9.15 ಗಂಟೆಗೆ ವಿಚಾರಿಸಿರುತ್ತಾರೆ. ಸದರಿ ಸಮಯದವರೆಗೆ ನಾನು ವರುಣ್ ರವರ ಮನೆಯಲ್ಲಿ ಇದ್ದೆ. ನಾನು, ಚಾಸಾ-1 ಮತ್ತು 3 ರವರು ಮರುದಿನ ಮದ್ಯಾಹ್ನದವರೆಗೆ ಆಸ್ಪತ್ರೆಯಲ್ಲಿ ಇದ್ದೆವು. ಆ ಸಮಯದವರೆಗೆ ಘಟನೆಯ ಬಗ್ಗೆ ಮಾತನಾಡಿರುವುದಿಲ್ಲ, ನಂತರ ಸಂಜೆ ಮಾತನಾಡಿರುತ್ತೇವೆ. ಪೋಲಿಸರು ದಿನಾಂಕ 14.12.2023 ರಂದು ಬೆಳಗ್ಗೆ 10.00 ಗಂಟೆಗೆ ಘಟನಾ ಸ್ಥಳಕ್ಕೆ ನನ್ನನ್ನು ಮತ್ತು ಚಾಸಾ-3 ರವರನ್ನು ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಾವು 10.00 ಗಂಟೆಯಿಂದ 11.00 ಗಂಟೆಯ ತನಕ ಇದ್ದು, ನಂತರ ಆಸ್ಪತ್ರೆಗೆ ಕರೆದುಕೊಂಡು

ಹೋಗಿರುತ್ತಾರೆ. ಕಾರ್ಯ ಎಲ್ಲಾ ಆದ ಮೇಲೆ ಬರಲು ಪೋಲಿಸರು ಹೇಳಿರುತ್ತಾರೆ. ನಾನು ರಾತ್ರಿ 9.15 ಗಂಟೆಗೆ ಹೋಗಿ ವಾಪಸ್ಸು 10.30 ಗಂಟೆಗೆ ಬಂದಿರುತ್ತೇನೆ. ಆ ಸಮಯ ನಾನು ಸಹಿ ಮಾಡಿರುತ್ತೇನೆ, ಎಷ್ಟು ಸಹಿ ಮಾಡಿರುತ್ತೇನೆ ಎಂದರೆ ನೆನಪಿಲ್ಲ. ನಂತರದಲ್ಲಿ 3 ಕಡೆಗಳಲ್ಲಿ ಸಹಿ ಮಾಡಿರುತ್ತೇನೆ. ದೂರು ಮತ್ತು ಬಟ್ಟೆ ವಶಪಡಿಸಿದ ಮಹಜರಿಗೆ ಸಹಿ ಮಾಡಿರುತ್ತೇನೆ. ವರುಣ್ ಜೊತೆಗೆ ನಾನು ಬೈಕಿನಲ್ಲಿ ಸದರಿ ದಿವಸ ಹೋಗಿರುವುದೇ ಇಲ್ಲ ಎಂದರೆ ಸರಿಯಲ್ಲ. ನಾನು ಹೋಗುವಾಗ, 1ನೇ ಆರೋಪಿ ಸ್ಕೂಟರಿನಲ್ಲಿ ಇದ್ದರು, ಅವರಿಗೆ ತುಂಬಾ ಗಲಾಟೆಯಾಯಿತು, ಗಲಾಟೆಯಾಗಿ 1ನೇ ಆರೋಪಿ ವರುಣ್ ಗೆ 3 ಬಾರಿ ಚೂರಿಯಿಂದ ಚುಚ್ಚಿದ್ದು, ಎಂದು ಮರುದಿನ ಸೃಷ್ಟಿಸಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 , 3, ನಾನು ಮತ್ತು ವರುಣ್ ಒಂದೇ ಗುಂಪಿನವರು ಎಂದರೆ 20 ವರ್ಷಗಳಿಂದ ಒಂದೇ ಗುಂಪಿನಲ್ಲಿ ಇರುತ್ತೇವೆ. ನಮ್ಮ ಗುಂಪಿಗೂ, 1ನೇ ಆರೋಪಿಯ ಗುಂಪಿಗೂ 5 ವರ್ಷಗಳಿಂದ ಮಾತು ಇರುವುದಿಲ್ಲ. ಆದ್ದರಿಂದ ನಾವು ಯಾವುದೋ ಕಾರಣದಿಂದ ಸತ್ತಿದ್ದರೂ , ಸುಳ್ಳು ಕತೆ ಸೃಷ್ಟಿ ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿ ವರುಣ್ ರವರಿಗೆ ಯಾವುದೇ ರೀತಿಯಲ್ಲಿ ಹಲ್ಲೆ ಮಾಡಿರುವುದಿಲ್ಲ ಸ್ಥ.ಳದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ,

18. ದಿನಾಂಕ 14.12.2023 ರಂದು ಮದ್ಯಾಹ್ನದ ನಂತರ ಸುಳ್ಳು ಕತೆಯನ್ನು ಸೃಷ್ಟಿಸಿ ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆ ಪ್ರಕಾರ ನಾವು, ಚಾಸಾ-1, 3 ಮತ್ತು ನಮ್ಮ ಗುಂಪಿನವರನ್ನು ಸುಳ್ಳು ಸಾಕ್ಷಿಯಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ

ರೀತಿಯಲ್ಲಿ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಇವತ್ತೂ ಕೂಡ ಗುಂಪಿನೊಂದಿಗೆ ಚರ್ಚಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

19. ಈ ಘಟನೆಗಿಂತ 4-5 ವರ್ಷಗಳ ಹಿಂದೆ ಮೃತ ವರುಣ್ ರವರ ಸೋದರ ಸಂಬಂಧಿ ಅರುಣ್ ಗಟ್ಟಿರವರ ಮೇಲೆ, ಈ ಪ್ರಕರಣದ 1ನೇ ಆರೋಪಿ ಕೊಲೆಯತ್ನ ಮಾಡಿದ್ದು ಎಂದು ನನ್ನ ಮುಖ್ಯ ವಿಚಾಣೆಯಲ್ಲಿ ಹೇಳಿದ್ದನ್ನು ನನಗೆ ಅರುಣ್ ಗಟ್ಟಿ ರವರು ವರುಣ್ ಮೃತ ಪಟ್ಟ ನಂತರ ತಿಳಿಸಿರುತ್ತಾರೆ, ಅದು ಮರುದಿನ ಬೆಳಗ್ಗೆ ಯಾಗಿರುತ್ತದೆ. ನಮ್ಮ ಮಾತೃ ಭಾಷೆ ತುಳು. ನಾವು ಕನ್ನಡದಲ್ಲಿ ಮಾತನಾಡುವುದಿಲ್ಲ. ಘಟನೆ ನಡೆಯಿತು ಎಂಬ ಸಮಯದಲ್ಲಿ ನಾನು ವರುಣ್ ರವರ ಕೈಹಿಡಿದು ಎಳೆದಿರುತ್ತೇನೆ. ನನಗೆ ಭಯವಾಯಿತು, ನನಗೆ ಏನೂ ಮಾಡಲು ಆಗಿರುವುದಿಲ್ಲ ಎಂದು ಪೋಲಿಸರ ಮುಂದೆ ಹೇಳಿರುತ್ತೇನೆ. ಎಂ.ಒ-7 ರ ಚೂರಿಗೂ 1ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ , ನಂತರದಲ್ಲಿ ಅದನ್ನು ಪೋಲಿಸರಿಗೆ ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು ನಾನು ಈಗಲೂ ಒಟ್ಟಿಗೆ ಇದ್ದೇವೆ, ಆತನು ನ್ಯಾಯಾಲಯದ ಹೊರಗೆ ಇದ್ದಾನೆ. ಚಾಸಾ-1 ರವರು ಕಾವೂರಿನಿಂದ ಒಬ್ಬರೇ ಬಂದಿರುತ್ತಾರೆ. ಈಗ ಮದ್ಯಾಹ್ನ ಊಟವನ್ನು ಒಟ್ಟಿಗೆ ಮಾಡಿರುತ್ತೇವೆ. ನಾವೆಲ್ಲಾ ಉಪಾಯ ಮಾಡಿ ಸುಳ್ಳು ಪ್ರಕರಣದಲ್ಲಿ ಆರೋಪಿತರನ್ನು ಸಿಲುಕಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ತಯಾರು ಮಾಡಿದ್ದು

ಎಂದರೆ ಸರಿಯಲ್ಲ. 1ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀ.ಎಂ.ಕೆ.ಆರ್ ವಕೀಲರಿಂದ**

20. ತೊಕ್ಕೊಟ್ಟಿ ನ ಜಂಕ್ಷನ್ ನಲ್ಲಿ ನೇತಾಜಿ ಆಸ್ಪತ್ರೆ ಇರುತ್ತದೆ. ಅದರ ಹತ್ತಿರ ಸಹಾರಾ ಆಸ್ಪತ್ರೆ ಇರುತ್ತದೆ. ಸದರಿ ಆಸ್ಪತ್ರೆಗಳು ಘಟನೆಯಾದ ಜಾಗದಿಂದ 3 ಕಿ.ಮೀ ಅಂತರದಲ್ಲಿ ಇರುತ್ತದೆ. ನಾವು ತುರ್ತಾಗಿ ಸದರಿ ಹತ್ತಿರ ಇರುವ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಚಾಸಾ-1 ರವರೊಂದಿಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನ್ಯಾಯಾಲಯಕ್ಕೆ ಬಂದು ಹೇಳಿಕೊಟ್ಟ ರೀತಿಯಲ್ಲಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ 2ನೇ ಆರೋಪಿ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

**ಉಳಿದಂತೆ 1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅನುಮೋದಿಸಲು ಕೋರಿದ್ದು, ಅನುಮತಿ ನೀಡಲಾಯಿತು.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓದಿ ಹೇಳಿ ಕೇಳಿ ಸರಿ ಇದೆ.**

**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ದ.ಕ., ಮಂಗಳೂರು.**